**<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 1092/2022**

| | | | |
|---|---|---|---|
| **ಹೆಸರು** | **:** | **ನರಸಿಂಹಲು** | **ದೋ.ಸಾ. 4** |
| **ತಂದೆಯ ಹೆಸರು** | **:** | **ಸಾಯಣ್ಣಾ** | **ಪ್ರಾ.ಸಾ.    4** |
| **ವಯಸ್ಸು** | **:** | **40 ವರ್ಷ** | **ದಿನಾಂಕಃ 21-03-2023** |
| **ಉದ್ಯೋಗ** | **:** | **ಗಾರೆ ಕೆಲಸ** | |
| **ವಾಸಸ್ಥಳ** | **:** | **ಕುಂಚಾವರಂ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-5 ನನಗೆ ಗೊತ್ತು. ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಸಂತೋಷ ನನಗೆ ಗೊತ್ತಿಲ್ಲ.  ಆತನನ್ನು ನಾನು ಈ ಹಿಂದೆ ಎಲ್ಲೂ ನೋಡಿಲ್ಲ.

ಈಗ ನನಗೆ ತೋರಿಸಲಾದ ದಾಖಲೆಯಲ್ಲಿರುವ ಸಹಿ ನನ್ನದೇ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು ಈಗ ನಿಪಿ-3 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಈಗ್ಗೆ ಸುಮಾರು 6 ತಿಂಗಳ ಹಿಂದೆ ನಾನು ಕುಂಚಾವರಂ-ಶ್ರಿರಾಮಂಪೂರ ತಾಂಡದ ಮುಖ್ಯ ರಸ್ತೆಯಲ್ಲಿ ಮನೆಗೆ ಬರುತ್ತಿದ್ದಾಗ  ದಾರಿ ಮಧ್ಯೆ ಸಿಕ್ಕ ಪೋಲೀಸರು ನಿಪಿ-3 ರ ದಾಖಲೆ ಮೇಲೆ ನನ್ನ ಸಹಿ ಪಡೆದುಕೊಂಡರು. ಸಹಿ ಪಡೆದುಕೊಳ್ಳುವ ಕಾಲಕ್ಕೆ ನನ್ನನ್ನು ಹೊರತುಪಡಿಸಿ ಪೊಲೀಸರ ಜೊತೆ ಬೇರೆ ಯಾರು ಇರಲಿಲ್ಲ.

ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಸದರಿ ಸಂದರ್ಭದಲ್ಲಿ ಪೊಲೀಸರ ಜೊತೆ ಇರಲಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತು ಅಥವಾ ವಾಹನವನ್ನು ಜಪ್ತು ಮಾಡಿಲ್ಲ.

ನಿಪಿ-3 ರ ದಾಖಲೆ ಮೇಲೆ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.  ಪೊಲೀಸರು ಅದನ್ನು ನನಗೆ ಓದಿ ಹೇಳಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ನಡೆಸಿರುವ ಜಪ್ತಿ ಪಂಚನಾಮೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ

ನುಡಿಯುತ್ತಿದ್ದು, ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕ 13-08-2022 ರಂದು ಶಿವರೆಡ್ಡಿಪಲ್ಲಿ ಕ್ರಾಸ್ ಹತ್ತಿರ ಕುಂಚಾವರಂ ಪೊಲೀಸರು ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಪೊಲೀಸರ ವಶದಲ್ಲಿದ್ದ ಈ ಪ್ರಕರಣದ ಆರೋಪಿ ಸಂತೋಷ ಹಾಜರು ಪಡಿಸಿದ ಕೆಎ-32 ಇಪಿ-6409 ರ ಮೊಟಾರ್ ಬೈಕನ್ನು ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಜಪ್ತು ಮಾಡಿ ಬೆಳಿಗ್ಗೆ 08-30 ರಿಂದ 09-30 ರವರೆಗೆ ನಿಪಿ-3 ರಂತೆ ಪಂಚನಾಮೆ ಬರೆದರು ಎನ್ನುವುದು ಸರಿಯಲ್ಲ.

ನಿಪಿ-3 ರ ದಾಖಲೆಯನ್ನು ಪೊಲೀಸರು ನನಗೆ ಓದಿ ಹೇಳಿದ್ದರು ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮವೇ ನಿಪಿ-3 ರ ಪಂಚನಾಮೆ ಜರುಗಿಸಿ ಬೈಕವೊಂದನ್ನು ಜಪ್ತು ಮಾಡಿದ್ದರು ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎ.ಎಸ್.ಹೆಚ್. ವಕೀಲರಿಂದಃ ಇಲ್ಲಾ</u>**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**